ಜಿ.ಕೆ. ರವೀಂದ್ರಕುಮಾರ್

# ಹೊಸ ಕಾವ್ಯ ಅಧ್ಯಯನದ ಕೈಮರ

'ಈ ಪುಸ್ತಕಕ್ಕೂ ಅನೇಕ ಮಿತಿಗಳಿವೆ. ಆದರೆ ಬರೆಯದೇ ಇದ್ದರೆ ಹೇಗೆ?' ಎಂಬ ಕಾಳಜಿ ಮತ್ತು ತುರ್ತನ್ನು ಇಟ್ಟುಕೊಂಡೇ ಹೊಸ ತಲೆಮಾರಿನ ಕಾವ್ಯ ಕುರಿತು 'ಹಲವು ಬಣ್ಣದ ಹಗ್ಗ' ಕೃತಿಯನ್ನು ಸುರೇಶ್ ನಾಗಲಮಡಿಕೆಯವರು ಬರೆದಿದ್ದಾರೆ. ಮಹತ್ವ ಪೂರ್ಣ ಉದ್ದೇಶವಿಟ್ಟುಕೊಂಡಿರುವ ಈ ಗಂಭೀರ ಪ್ರಯತ್ನದ ಕುರಿತು 'ಬರೆಯದೇ ಇದ್ದರೆ ಹೇಗೆ?' ಎಂದು ಕೇಳಿಕೊಂಡೇ ನಾನು ನನ್ನ ಟಿಪ್ಪಣಿ ಬರೆಯುತ್ತಿರುವೆ. ಇಂಥದೊಂದು ತುರ್ತು ಇಲ್ಲದ ಕಾರಣದಿಂದಲೇ ಸೃಜನಶೀಲ ಬರಹಕ್ಕೆ ಸಂವಾದಿಯಾಗಿ ಇರಬೇಕಾದ ವಿಮರ್ಶೆ ಇಂದು ಬಡಕಲಾಗಿದೆ. ವಿಮರ್ಶೆಯ ತೋರುಬೆರಳಿಲ್ಲದೆ ಅಸ್ತವ್ಯಸ್ತ ಮಣಿಗಳ ಹಾಗೆ ಹರಡಿಕೊಂಡಿರುವ ತೊಂಬತ್ತರ ದಶಕದ ನಂತರದ ಕಾವ್ಯ ತನ್ನ ಪಾಡಿಗೆ ತಾನು ತೋರಿಕೊಂಡಿದೆ. ಇಂತಲ್ಲಿ ಇದರ ದಿಕ್ಕುಗಳನ್ನು ಹಿಡಿಯುವ ಪ್ರಯತ್ನದ ಹಾಗೆ ಈ ಪುಸ್ತಕವಿದೆ.

ಲೇಖಕರೇ ಹೇಳುವಂತೆ "ಇದೊಂದು ಅಪೂರ್ಣ ಅಧ್ಯಯನ. ಇದರಲ್ಲಿ ಬಹುಪಾಲು ಚರ್ಚೆಗೆ ಒಳಪಟ್ಟಿರುವ ಕವಿಗಳು ಎರಡು ಸಾವಿರ ಇಸವಿಯ ಈಚಿನವರೇ. ಆದರೂ ಅಸಮಗ್ರದಲ್ಲೂ ಇಪ್ಪತ್ತೊಂದನೇ ಶತಮಾನದ ಕಾವ್ಯದ ಬಗ್ಗೆ ಒಂದು 'ನೋಟ'ವಂತೂ ಸಿಕ್ಕಿದೆ ಎಂದು ಭಾವಿಸುವೆ". ಇದರಲ್ಲಿ ಬಹುತೇಕ ಯಶಸ್ವಿಯಾಗಿರುವ ನಾಗಲಮಡಿಕೆಯವರು ಕಳೆದ ಕೆಲಕಾಲದಿಂದ ಇದಕ್ಕೆ ಸಿದ್ಧತೆಯೆಂಬಂತೆ ಕವಿ ಕಾವ್ಯ ಕುರಿತು ಬಿಡಿಬಿಡಿಯಾಗಿ ಪ್ರತಿಕ್ರಿಯಿಸುತ್ತಲೇ ಬಂದಿದ್ದಾರೆ. ತಮ್ಮ 'ತಕ್ಕ ಮಣ್ಣಿನ ತೇವಕ್ಕಾಗಿ' ಹಾಗು 'ಕಾಣ್ಕೆ ಕಣ್ಕಟ್ಟು' ಕೃತಿಗಳಲ್ಲಿ ಹಲವರ ಕಾವ್ಯದ ಕುರಿತು ಬರೆದಿದ್ದಾರೆ. ಪ್ರಸ್ತುತ ಕೃತಿಯ ವೈಚಾರಿಕತೆಯೂ ಅವರ ಹಿಂದಲ ಕೃತಿಗಳಲ್ಲಿ ಪರಿಶೀಲನೆಗೊಳಪಟ್ಟಿದೆ. ಎಚ್.ಎಸ್. ಶಿವಪ್ರಕಾಶರ ಕಾವ್ಯದ ಕುರಿತು ಈ ಹಿಂದೆ ಅವರು ನೀಡಿದ 'ಹಲವು ಬಣ್ಣಗಳ ಹಗ್ಗ' ತಲೆಬರೆಹವೇ ಈ ಕೃತಿಯ ಶೀರ್ಷಿಕೆಯಾಗಿದೆ. 'ಬಹುತ್ವ'ವನ್ನು 'ವೈವಿಧ್ಯ'ವೆಂದೇ ಕರೆಯಲು ಇಷ್ಟಪಡುವ ಸುರೇಶ್ ಅದನ್ನು ಹಗ್ಗದ ಹೆಣಿಗೆಯ ರೂಪಕದಲ್ಲಿ ಕಾಣುತ್ತಾರೆ. ದೇಶವೇ ಈ ರೂಪಕದ ಪ್ರತಿರೂಪವಾಗಿ ಅವರಿಗೆ ಕಂಡಿದೆ.

ಪ್ರಸ್ತುತ ಕೃತಿಯಲ್ಲಿ ಹೊಸಬರ ಕಾವ್ಯವು ಜಾಗತೀಕರಣವನ್ನೂ ಮೀರಿದ ಬದುಕಿನ ಪಲ್ಲಟಗಳನ್ನು ಹೇಗೆ ಎದುರಿಸಿದೆ, ಸೃಷ್ಟೀಕರಣದ ಕಾತರವಿದೆಯೇ, ಇಲ್ಲಿಯ ನಗರೀಕೃತ ಬದುಕು, ಹಿಂಸೆಯ ರೂಪ, ಮಹಿಳಾ ಕಾವ್ಯದ ದನಿ, ದಲಿತ ಮೀಮಾಂಸೆ, ಜನಪದ ನೆಲೆ, ಸಾಂಸ್ಕೃತಿಕ ಅಸ್ಮಿತೆ ಮುಂತಾದ ಸಂಗತಿಗಳು ಹೇಗೆ ಪ್ರಭಾವಿಸಿವೆ? ಮುಂತಾದ ಪ್ರಶ್ನೆಗಳ ಮೂಲಕ ಮೂರು ಅಧ್ಯಾಯಗಳಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಅಲ್ಲದೆ ಹದಿನೇಳು ಕವಿಗಳ ಕಾವ್ಯವನ್ನು ಬಿಡಿಯಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇದೊಂದು ಯಾದೃಚ್ಛಿಕ ಆಯ್ಕೆ. ಯಾವ ಅನುಕ್ರಮಣಿಕೆಯೂ ಇಲ್ಲ. ಒಟ್ಟು ಕಾವ್ಯದ ವಿಶ್ಲೇಷಣೆಯಲ್ಲಿ ಹಿಂದಿನ ಕವಿಗಳಿಂದ ಹಿಡಿದು ಇದೀಗ ಬರೆಯುತ್ತಿರುವ, ಒಂದು ಸಂಕಲವನ್ನೂ ಪ್ರಕಟಿಸದ ಕವಿಗಳ ಸಾಲುಗಳನ್ನೂ ಉದಾಹರಿಸುತ್ತಾರೆ. ಇಲ್ಲಿರುವುದು ಕೇವಲ ಕಾವ್ಯ